**<u>ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.</u>**

ಸಿ.ಸಿ. ನಂ.13/2025
ಪಿ.ಡಬ್ಯೂಃ 1
ಸಿಡಬ್ಲ್ಯೂ-1

ಸಾಕ್ಷಿದಾರರ ಹೆಸರು : ಚಾಲುಕ್ಯ ಷಹಾಪುರ

ತಂದೆಯ ಹೆಸರು : ನಾಗಪ್ಪಾ ಷಹಾಪುರ

ವಯಸ್ಸು : 37 ವರ್ಷ

ಉದ್ಯೋಗ : ಅಬಕಾರಿ ನೀರಿಕ್ಷಕರು , ಅಂಕೋಲಾ

ವಾಸ : ಅಂಕೋಲಾ

ದಿನಾಂಕಃ 12-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**<u>ಮುಖ್ಯ ವಿಚಾರಣೆಃ</u> ಸರಕಾರದ ಪರವಾಗಿ ಸ .ಸ. ಆ ರವರಿಂದ ಃ**

1. ನಾನು ಡಿಸೆಂಬರ 2023 ರಿಂದ ಇಲ್ಲಿಯ ತನಕ ಅಂಕೋಲಾ ವಲಯದಲ್ಲಿ ಅಬಕಾರಿ ನೀರಿಕ್ಷಕನಾಗಿ ಕಾರ್ಯ ನಿರ್ವಹಿಸಿದ್ದೇನೆ .

2. ದಿಃ21-03-2024 ರಂದು ನಾನು ಬೆಳಿಗ್ಗೆ 4-00 ಗಂಟೆ ಸಮಯದಲ್ಲಿ ಅಂಕೋಲಾ ವಲಯದಲ್ಲಿ ಗಸ್ತು ಕಾರ್ಯ ನಿರ್ವಹಿಸುತ್ತಿರುವಾಗ ಒಂದು ದೂರವಾಣಿ ಕರೆ ಬಂದಿರುತ್ತದೆ . ಅದರಲ್ಲಿ ಹಳವಳ್ಳಿ ಗ್ರಾಮದ ಅಶೋಕ ಕೃಷ್ಣಾ ನಾಯ್ಕ ಇತನ ಮನೆಯಲ್ಲಿ ಅಕ್ರಮವಾಗಿ ಕರ್ನಾಟಕ ರಾಜ್ಯದಲ್ಲಿರುವ ಸರಾಯಿಯನ್ನು ಸಂಗ್ರಹಿಸಿರುತ್ತಾನೆ ಎಂದು ಮಾಹಿತಿ ಬಂದಿರುತ್ತದೆ . ಕೂಡಲೆ ನಾವು ಅಂದರೆ ನಮ್ಮ ಚಾಲಕನಾದ ವಿನಾಯಕ ನಾಯ್ಕ ಹಾಗೂ ಚಾಸಾ -2 ಮತ್ತು 3 ರವರೊಂದಿಗೆ ಇಲಾಖಾ ಜೀಪ ನಲ್ಲಿ ಹಳವಳ್ಳಿ ಗ್ರಾಮಕೆಕ ಬೆಳಿಗೆ 5-30 ಕ್ಕೆ ಹೋಗಿರುತ್ತೇವೆ . ನಾವು ಒಂದು ಮನೆಯ ಮುಂದೆ ನಿಂತಾದ ಆ ಮನೆಯ ಮುಂದೆ ನಿಂತಿರುವ ಒಬ್ಬ ವ್ಯಕ್ತಿ ನಮ್ಮನ್ನು ನೋಡಿ ಓಡಿ ಹೋಗಿರುತ್ತಾನೆ ತದನಂತರ ನಾನವು ಶೋಧನಾ ಸಮುಚಿತ ವಾರಂಟನ್ನು ಸ್ಥಳದಲ್ಲಿ ತಯಾರಿಸಿ ಕೊಂಡು ಇಲಾಖಾ ಪಂಚರ ಸಮಕ್ಷಮ ಮನೆಯ ಒಳಗಡೆ ಪ್ರವೇಶ ಮಾಡಿರುತ್ತೇವೆ . ಆ ಮನೆಯ ಲ್ಲಿ ಹುಡುಕಾಡುವಾಗ ಮನೆಯ ಎಡ ಭಾಗದಲ್ಲಿ ಬಿಳಿಯ ಬಣ್ಣದ ಪ್ಲಾಸ್ಟಿಕ ಚೀಲ ಸಿಕ್ಕಿರುತ್ತದೆ .

ನಂತರದಲ್ಲಿ ಪಂಚರ ಸಮಕ್ಷಮ ದಲ್ಲಿ ಪ್ಲಾಸ್ಟಿಕ ಚೀಲವನ್ನು ತೆಗೆದು ನೋಡಲಾಗಿ ಅಲ್ಲಿ ಕರ್ನಾಟಕ ರಾಜ್ಯದಲ್ಲಿ ಮಾತ್ರ ಮಾರಾಟಕ್ಕೆ ಇದ್ದ 90 ಎಮ್ ಎಲ್ ನ 334 ನ ಪೌಚ ಗಳು ಓರಿಜಿನಲ್ ಚಾಯ್ಸು ವಿಸ್ಕಿ ಯ ಪ್ಯಾಕೇಟ ಆಗಿರುತ್ತದೆ ನಂತರ ನಾವು ಅವುಗಳನ್ನು ಇಲಾಖಾ ಪಂಚರ ಸಮಕ್ಷಮ ಪಂಚನಾಮೆ ಮುಖಾಂತರ ಅಮಾನತು ಪಡಿಸಿಕೊಂಡಿರುತ್ತೇವೆ ಸದ್ರಿ ಪಂಚನಾಮೆ ಬೆಳಿಗ್ಗೆ 5-30 ರಿಂದ 6-45 ರವರೆಗೆ ಬರೆಯ ಲಾಗಿರುತ್ತದೆ . ಸದ್ರಿ ಅಮಾನತು ಪಡಿಸಿಕೊಂಡ ವಸ್ತುಗಳ ಮೇಲೆ ಪಂಚರ ಸಹಿ ಪಡೆದುಕೊಂಡು ಅರಗಿನ ಶೀಲುನ್ನು ಹಾಕಿ ಅವುಗಳಲ್ಲಿ ಪ್ರತ್ಯೇಕವಾಗಿ 24 ಟೆಟ್ರಾ ಪ್ಯಾಕಗಳನ್ನು ರಾಸಾಯನಿಕ ಪರಿಕ್ಷೆಗಾಗಿ ಸ್ಯಾಂಪಲಗಾಗಿ ತೆಗೆದುಕೊಂಡಿರುತ್ತೇವೆ, ನಂತರ ನಾವು ಬೆಳಿಗೆ 6-45 ಗಂಟೆಗೆ ಕೃತ್ಯ ನಡೆದ ಸ್ಥಳದಿಂದ ನಡೆದು ಇಲಾಖಾ ಕಚೇರಿಗೆ ವಾಪಸ್ಸು ಆಗಿರುತ್ತೇವೆ. ನಂತರ ದಲ್ಲಿ ಸದ್ರಿ ಪ್ರಕರಣಕ್ಕೆ ಸಂಭಂಧಿಸಿದಂತೆ ದೂರನ್ನು ಕೊಟ್ಟು ಪ್ರ ವ ವ ತಯಾರಿಸಲಾಗಿರುತ್ತದೆ ಹಾಗೂ ಅದನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ನನ್ನ ಮೇಲಾಧಿಕಾರಿಗೆ ವನೀದಿಸಿಕೊಂಡಿರುತ್ತೇನೆ .

3. ಸಾಕ್ಷಿಗೆ ದೂರನ್ನು ತೋರಿಸಲಾಗಿ ಸಾಕ್ಷಿ ಅದಲ್ಲಿ ರುವ ಸಹಿ ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-1 ಎಂದು, ಸಾಕ್ಷಿ ಸಹಿ ನಿಪಿ-1 (ಎ) ಎಂದು ಪಂಚನಾಮೆಯಲ್ಲಿ ಸಾಕ್ಷಿ ತೋರಿಸಲಾಗಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿರುವುದರಿಂದ ಸದ್ರಿ ಪಂಚನಾಮೆಯನ್ನು ನಿಪಿ-2 ಎಂದು , ಸಾಕ್ಷಿ ಸಹಿಯನ್ನು ನಿಪಿ-2 (ಎ) ಎಂದು , ಶೊಧನಾ ಸಮುಚಿತ ವಾರಂಟವನ್ನು ಸಾಕ್ಷಿಗೆ ತೋರಿಸಲಾಗಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-3 ಎಂದು, ಪ್ರ ವ ವ ಸಾಕ್ಷಿ ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-4 ಎಂದು , ಸಾಕ್ಷಿ ಸಹಿಯನ್ನು ನಿಪಿ-4 (ಎ) ಎಂದು ಗುರುತಿಸಲಾಯಿತು . ನ್ಯಾಯಾಲಯದ ಮುಂದೆ ಇರುವ 24 ಟೆಟ್ರಾ ಪ್ಯಾಕಗಳನ್ನು ಸಾಕ್ಷಿ ನೋಡಿ ಗುರುತಿಸಿರುವುದರಿಂದ ಅವುಗಳನ್ನು ಒಟ್ಟಾರೆ ಮು.ಮಾ -1 ಎಂದು ಗುರುತಿಸಲಾಯಿತು . ಸಾಕ್ಷಿ ಯು ಸದ್ರಿ ಟೆಟ್ರಾ ಪ್ಯಾಕಗಳನ್ನು ಹಾಕಿದ ಬಿಳಿ ಚೀಲದ ಮೇಲೆ ಇರುವ ತನ್ನ ಸಹಿ ನೋಡಿ ಗುರುತಿಸಿರುವುದರಿಂದ ಅದನ್ನು ಮು.ಮಾ-1 ಎ ಎಂದು ಗುರುತಿಸಲಾಯಿತು .

4. ಆ ದಿನ ಬೆಳಗಿನ ಜಾವ ಅಗಿದ್ದು ಕತ್ತಲಾದ ಕಾರಣ ಓಡಿ ಹೋದ ವ್ಯಕ್ತಿಯ ಮುಖ ಕಂಡಿರಲಿಲ್ಲ . ಅದರೆ ನಂತರದಲ್ಲಿ ಈ ನ್ಯಾಯಾಲಯದ ಮುಂದೆ ನಿಂತಿರುವ ವ್ಯಕ್ತಿಯು ಮಾನ್ಯ ಜಿಲ್ಲಾ ನ್ಯಾಯಾಲಯದಿಂದ

ನಿರೀಕ್ಷಣಾ ಜಾಮಿನು ಪಡೆದು ನಮ್ಮ ಕಚೇರಿಗೆ ಹಾಜರಾಗಿರುವುದರಿಂದ ಮಾನ್ಯ ನ್ಯಾಯಾಲಯದ ಅದೇಶ ಪಾಲಿಸಿರುತ್ತೇನೆ ಮತ್ತು ನ್ಯಾಯಾಲಯದ ಮುಂದೆ ನಿಂತಿರುವ ಅರೊಪಿಯು ಆ ದಿನ ನಮ್ಮ ಕಚೇರಿಗೆ ಹಾಜರಾಗಿ ನೀರಿಕ್ಷಣಾ ಜಾಮೀನು ಹಾಜರು ಪಡಿಸಿದ ವ್ಯಕ್ತಿ ಅಗಿರುತ್ತಾನೆ . ನ್ಯಾಯಾಲಯದ ಮುಂದೆ ನಿಂತಿರುವ ಅರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ .

**<u>ಪಾಟೀ ಸವಾಲುಃ</u> ಆರೋಪಿ ಪರ ಶ್ರೀ ಡಿ.ಎನ್ .ಎನ್ ವಕೀಲರಿಂದಃ**

5. ಆ ಸಮಯದಲ್ಲಿ ಲೋಕ ಸಭಾ ಚುನಾವಣೆ ಇರುವುದರಿಂದ ನಾನು ರಾತ್ರಿ 2-3 ಗಂಟೆಯಿಂದ ಗಸ್ತು ಕರ್ತವ್ಯ ದಲ್ಲಿ ಇದ್ದೆ . ಆ ದಿವಸ ನಾನು ಅಂಕೋಲಾ ವಲಯ ರಾಷ್ಟ್ರೀಯ ಹೆದ್ದಾರಿ 66 ರಲ್ಲಿ ಗಸ್ತು ಕರ್ತ್ಯ ಮಾಡಿರುತ್ತೇನೆ ನನಗೆ ಬಾತ್ಮಿ ಬಂತು ಎಂದು ಹೇಳಲಾದ ಸಮಯದಲ್ಲಿ ನಾನು ಅಂಕೋಲಾದಲ್ಲಿ ಇದ್ದೆ . ನನ್ನ ಪ್ರಕಾರ ಸದ್ರಿ ಬಾತ್ಮಿ ಬೆಳಗಿನ ಜಾವ 4-00 ಗಂಟೆಗೆ ಬಂದಿರುತ್ತದೆ ಸದ್ರಿ ಬಾತ್ಮಿ ನನಗೆ ದೂರವಾಣಿ ಮುಖಾಂತರ ಬಂದಿರುತ್ತದೆ . ಅಂಕೋಲಾ ದ ನಿಮ್ಮ ಕಚೇರಿಯಿಂದ ಮತ್ತು ಅಂಕೋಲಾ ನಗರದ ನ್ಯಾಯಾಧೀಶರ ಮನೆಯು 500 ಮೀಟರ ದೂರದಲ್ಲಿ ಇರುತ್ತದೆ ಎಂದರೆ ಸರಿ . ಅಂಕೋಲಾದಿಂದ ಹಳವಳ್ಳಿ ಗ್ರಾುವು 50 ರಿಂದ 60 ಕಿ.ಮೀಟರ ದೂರವಾಗುತ್ತದೆ . ನಿಮಗೆ ಬಾತ್ಮಿದಾರರಿಂದ ಬಾತ್ಮಿ ಬಂದಾಗ ಅಂಕೋಲಾದ ನ್ಯಾಯಾಧಿಶರಿಂದ ಶೋಧನಾ ವಾರಂಟ ನ್ನು ಪಡೆದುಕೊಳ್ಳಲು ತೊಂದರೆ ಇತ್ತಾ ಎಂರೆ ನನಗೆ ಬಾತ್ಮಿ ಬಂದ ಕೂಡಲೆ ಆ ಸ್ಥಳದಲ್ಲಿ ಏನಾಗಿದೆ ಎಂದು ನಾನು ನೊಡೇಲು ಹೋಗಿದ್ದೆ . ಆ ದಿನ ನನ್ನ ಪ್ರಕಾರ ನಮ್ಮ ಇಲಾಖಾ ಜೇಪನ ಚಾಲಕ ವಿನಾಯಕ ನಾಯ್ಕು ಎಂಬುವವರು ಇದ್ದರು . ನನಗೆ ಬಾತ್ಮಿ ಬಂದ ತಕ್ಷಣ ಅಂದರೆ ಬೆಳಗಿನ ಜಾವ 4-00 ಗಂಟೆಗೆ ನಾನು ಇಲಾಖಾ ಜೇಪದಲ್ಲಿ ಕೃತ್ಯ ನಡೆಯಿತು ಎಂಬ ಸ್ಥಳಕೆಕ ಹೋಗಿರುತ್ತೇನೆ . ಆ ದಿನ ನಾವು ನೇರವಾಗಿ ಹಳವಳ್ಳಿ ಗ್ರಾಮಕ್ಕೆ ಹೋಗಿರುತ್ತೇವೆ . ಹಳವಳ್ಳಿ ಗ್ರಾಮದಲ್ಲಿ ತುಂಬಾ ಮನೆಗಳು ಇರುತ್ತವೆ ಮತ್ತು ಜನಬೀಡವಾದ ಸ್ಥಳ ಎಂದರೆ ಸರಿ . ಆರೋಪಿ ಮನೆ ಮತ್ತು ಅರೋಪಿಯ ಗುರುತು ಪರಿಚಯ ಸ್ವತಃ ನಿಮಗೆ ಇತ್ತಾ ಎಂದರೆ ನನಗೆ ಇರಲಿಲ್ಲ ನನ್ನ ಕಚೇರಿಯಿಂದ ಬಿಟ್ ಗೆ ಹೋಗುವ ಸಿಬ್ಬಂದಿಯಾದ ಚಾಸಾ -3 ರವರಿಗೆ ಆರೋಪಿಯ ಮತ್ತು ಅರೋಪಿಯ ಮನೆಯ ಬಗ್ಗೆ ಪರಿಚಯ ಇತ್ತು . ಆರೋಪಿಯ ಮನೆಗೆ ಹೋಗಲು ದಾರಿಯನ್ನು ಯಾರು ತೋರಿಸಿದರು ಎಂದರೆ ಬಾತ್ಮಿ ದಾರರು ಕೊಟ್ಟ

ಮಾಹಿತಿ ಮತ್ತು ಚಾಸಾ 3 ರವರು ನೀಡಿದ ಮಾಹಿತಿ ಒಂದಕ್ಕೊಂದು ತಾಳೆ ಆಗುತ್ತಿತು ಆ ಕಾರಣದಿಂದ ಆರೋಪಿ ಮನೆಗೆ ಹೋದೆವು , ಈ ವಿಷಯವನ್ನು ನ್ಮು ಪಿರ್ಯಾದಿಯಲ್ಲಾಗಲಿ ಪಂಚನಾಮೆಯಲ್ಲಾಗಲಿ ಕಾಣಿಸಿಲ್ಲ . ಘಟನಾ ಸ್ಥಳಕ್ಕೆ ಹೋದಾಗ ಬೆಳಿಗ್ಗೆ 5-30 ಆಗಿತ್ತು. ನಾವು ಮನೆಯ ಒಳಗಡೆ ಹೋಗಿಲ್ಲ . ಸದ್ರಿ ಮಾಲುಗಳು ನಿಮ್ಮ ಪ್ರಕಾರ ನಿಮಗೆ ಎಲ್ಲಿ ಸಿಕ್ಕಿದವು ಎಂದರೆ ಮನೆಯ ಒಳಗಡೆ ಸಿಕ್ಕಿರುತ್ತದೆ . ಸಾಕ್ಷಿ ಪುನಃ ಮುಂದುವರೆದು ಶೋಧನಾ ಸಮುಚಿತ ವಾರಂಟನ್ನು ತಯಾರಿಸಿದ ಮೇಲೆ ಆರೋಪಿಯ ಮನೆಯ ಒಳಗಡೆ ಹೋಗಿರುತ್ತೇವೆ . ಹಳವಳ್ಳಿ ಗ್ರಾಮದಲ್ಲಿ ನೀವು ಹೋದಾಗ ಅಲ್ಲೆ ಇದ್ದ ಸ್ವತಂತ್ರ ಸಾಕ್ಷಿದಾರನ್ನು ಕಲೆ ಹಾಕುವ ಪ್ರಯತ್ನ ಮಾಡಿರುತ್ತಿರಾ ಎಂದರೆ ಇಲ್ಲ . ಆರೋಪಿಯು ಓಡಿ ಹೋದನು ಎಂದು ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿಯು ಯಾವ ದಿಕ್ಕಿಗೆ ಓಡಿ ಹೋಗಿರುತ್ತಾನೆ ಎಂದರೆ ದಿಕ್ಕು ನೆನಪಿಲ್ಲ ಆದರೆ ಮನೆಯ ಎಡಭಾಗದಲ್ಲಿ ಓಡಿ ಹೋಗಿರುತ್ತಾನೆ . ನಾವು ಪಂಚನಾಮೆಯನ್ನು ಬೆಳಿಗ್ಗೆ 5-30 ರಿಂದ ಅಂದರೆ ಸ್ಥಳಕ್ಕೆ ಹೋಗಿ ಮುಟ್ಟಿದ ಕೂಡಲೆ ಪಂಚನಾಮೆ ಬರೆಯಲು ಪ್ರಾರಂಭಸಿರುತ್ತೇವೆ . ನನ್ನ ಪ್ರಕಾರ ಶೋಧನಾ ಸಮುಚಿತ ವಾರಂಟನ್ನು ಮೊದಲು ಬರೆದಿರುತ್ತೇವೆ . ಓಡಿ ಹೋದ ವ್ಯಕ್ತಿಯು ಯಾವ ಬಣ್ಣದ ಬಟ್ಟೆ ಹಾಕಿದ್ದ ಎಂರೆ ಬೆಳಗಿನ ಜಾವ ಆಗಿದ್ದರಿಂದ ಕತ್ತಲು ಇತ್ತು ಹಾಗಾಗಿ ಯಾವ ಬಣ್ಣದ ಬಟ್ಟೆ ಹಾಕಿದ್ದ ಎಂದು ಹೇಳಲು ಬರುವುದಿಲ್ಲ . ಓಡಿ ಹೋದ ವ್ಯಕ್ತಿಯನ್ನು ಹಿಡಿಯುವ ಪ್ರಯತ್ನ ಮಾಡಿರುತ್ತಿರಾ ಎಂರೆ ನಾವು ಅವರನ್ನು ಅರಣ್ಯದಲ್ಲಿ ಹುಡುಕಾಡಿರುತ್ತೇವೆ. ಸದ್ರಿ ಓಡಿ ಹೋದ ವ್ಯಕ್ತಿಯು ಅರಣ್ಯದ ಕಡೆಗೆ ಓಡಿ ಹೋಗಿದ್ದ ಆತನನ್ನು ಹುಡುಕಿದರೂ ಸಿಕ್ಕಿಲ್ಲ . ಅರಣ್ಯ ಪ್ರದೇಶದಲ್ಲಿ 100 ಮೀಟರ ವರೆಗೆ ನಾವು ಹುಡುಕಾಡಿರುತ್ತೇವೆ ದಟ್ಟ ಅರಣ್ಯವಾಗಿದ್ದರಿಂದ ಮುಂದೆ ಹೋಗಿ ಹುಡುಕಲಿಲ್ಲ . ಅರಣ್ಯದಲ್ಲಿ 10 ರಿಂದ 15 ನಿಮಿಷವರಗೆ ಹುಡುಕಾಡಿರುತ್ತೇವೆ . ನನ್ನ ಪ್ರಕಾರ ನಾನು ಮತ್ತು ಚಾಸಾ -3 ರವರು ಅರಣ್ಯ ಪ್ರದೇಶದಲ್ಲಿ ಹುಡುಕಾಡಿರುತ್ತೇವೆ . ಮನೆಯಲ್ಲಿ ಹುಡುಕಾಡಿದೆವು ಎಂದು ಹೇಳಿದಂತೆ ಒಟ್ಟು ಎಷ್ಟು ಕೋಣೆಗಳು ಆ ಮನೆಯಲ್ಲಿ ಇದ್ದವು ಎಂದರೆ 2 ಕೋಣೆಗಳು ಇದ್ದವು . ಅರಣ್ಯದಲ್ಲಿ ಓಡಿ ಹೋದ ವ್ಯಕ್ತಿಯನ್ನು ಹುಡುಕಾಡಿದ ಬಗ್ಗೆ ಮತ್ತು ಆತನನ್ನು ಓಡಿಸಿಕೊಂಡ ಹೋದ ಬಗ್ಗೆ ಪಂಚನಾಮೆಯಲ್ಲಿ ಬರೆದಿರುತ್ತಿರಾ ಎಂದರೆ ಇಲ್ಲ . ವಶ ಪಡಿಸಿಕೊಂಡೆವು ಎಂದು ಹೇಳಲಾದ ವಸ್ತುಗಳು ಯಾವ ಕೊಣೆಯಲ್ಲಿ ಇತ್ತು ಎಂದರೆ ಮೊದಲಿನ ಕೊಣೆಯ

ಎಡಭಾಗದಲ್ಲಿ ಇತ್ತು . ನೀವು ವಶಪಡಿಸಿಕೊಂಡೆವು ಎಂದು ಹೆಳಲಾದ ಬಿಳಿ ಬಣ್ಣದ ಪ್ಲಾಸ್ಟಿಕ ಚೀಲ ಈ ದಿನ ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಸರಿ .

6. ನೀವು ಆ ದಿನ ಗಸ್ತು ತಿರುಗುತ್ತಿದ್ದ ಬಗ್ಗೆ ಅಥವಾ ಕರ್ತವ್ಯದಲ್ಲಿ ಇದ್ದ ಬಗ್ಗೆ ನಿಮ್ಮ ಠಾಣಾ ರಜಿಷ್ಟರದಲ್ಲಿ ನಮೂದು ಆಗಿರುತ್ತದೆ ಎಂದರೆ ಸರಿ . ಆ ದಿನ ನೀವು ಗಸ್ತು ತಿರುಗುತ್ತಿದ್ದ ಬಗ್ಗೆ ಅಥವಾ ಕರ್ತವ್ಯ ದ ಬಗ್ಗೆ ನಿಮ್ಮ ಠಾಣಾ ರಜಿಷ್ಟರವನ್ನು ನಿಮ್ಮ ತನಿಖಾಧಿಕಾರಿ ಬಳಿ ಕೊಟ್ಟಿರುತ್ತಿರಾ ಎಂದರೆ ಇಲ್ಲ . ಅವು ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಸರಿ . ಆತನ ಆಧಾರ ಕಾರ್ಡ ಅದೇ ಕೋಣೆಯಲ್ಲಿ ಇತ್ತು . ಅದು ಕೊಣೆಯ ಯಾವ ಭಾಗದಲ್ಲಿ ಇತ್ತು ಎಂದು ಅಷ್ಟೊಂದು ನೆನಪಿಗೆ ಬರುತ್ತಿಲ್ಲ . ನೀವು ದಾಳಿಗೆ ಹೊದೆವು ಎನ್ನಲಾದ ಸಮಯದಲ್ಲಿ ಆ ಕೋಣೆಯಲ್ಲಿ ಏನೆಲ್ಲಾ ಇರುತ್ತದೆ ಮತ್ತು ಅಲ್ಲಿ ಬಾತ್ಮಿದಾರರಿಂದ ಪಡೆದು ಕೊಂಡ ಮಾಹಿತಿಯಂತೆ ಅವುಗಳು ಸರಾಯಿ ಹೌದೊ ಅಲ್ಲವೊ ಎಂಬ ಬಗ್ಗೆ ತನಿಖೆ ಮೊದಲು ಮಾಡಬೇಕಾಗುತ್ತದೆ ಮತ್ತು ಆರೋಪಿ ಬಗ್ಗೆ ವಿಚಾರಣೆ ಮಾಡಬೇಕಾಗುತ್ತದೆ ಎಂದರೆ ಸರಿ . ದಾಳಿಗೆ ಹೋದೆವು ಎಂದು ಹೇಳಲಾದ ಸಮಯದಲ್ಲಿ ಮೊದಲಿಗೆ ಪಂಚನಾಮೆ ಬರೆಯುವುದಿಲ್ಲ ಎಲ್ಲಾ ವಿಚಾರಣೆ ಮಾಡಿ ನಂತರ ದಲ್ಲಿ ಪಂಚನಾಮೆ ಬರೆಯಲಾಗುತ್ತದೆ ಎಂದರೆ ಸರಿ . ಲೋಕ ಸಭಾ ಚುನಾವಣೆ ನಿಮಿತ್ತ ನಿಮ್ಮ ಮೇಲಾಧಿಕಾರಿಗಳಿಂದ ಪ್ರಸಂಶೆ ಪಡೆದು ಕೊಳ್ಳಲು ಮತ್ತು ಪ್ರಮೊಷನ ಗಿಟ್ಟಿಸಿಕೊಳ್ಳಲು ಅಂಕಿ ಅಂಶಕೋಸ್ಕರ ಈ ಸುಳ್ಳು ಪ್ರಕರಣ ಮಾಡಿದ್ದು ಎಂದರೆ ಸರಿಯಲ್ಲ . ನ್ಯಾಯಾಲಯದ ಮುಂದೆ ಇರುವ ಮುಮಾ-1 1 ಖಾಲಿ ಟೆಟ್ರಾ ಪ್ಯಾಕ ಎಂದರೆ ಸರಿ . ಸದ್ರಿ ಖಾಲಿ ಟೆಟಾ ಪ್ಯಾಕ ಗಳು ಯಾವುದೆ ಬಾರ ಅಂಗಡಿಗಳಲ್ಲಿ ಸಿಗುತ್ತದೆ ಎಂದರೆ ಸರಿ . ನೀವು ಹೇಳಿದಂತೆ ವಿನಾಯಕ ನಾಯಕ ಎಂಬ ಚಾಲಕನನ್ನು ಈ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಸೇರಿಸಿಲ್ಲ ಮತ್ತು ಆತನ ಸಹಿಯನ್ನು ಪಂಚನಾಮೆಯಲ್ಲಿ ಪಡೆದು ಕೊಂಡಿಲ್ಲ ಎಂದರೆ ಆತನು ಗುತ್ತಿಗೆ ಆಧಾರದಲ್ಲಿ ನಮ್ಮ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವುರಿಂದ ಆತನನ್ನು ಈ ಪ್ರಕರಣದಲ್ಲಿ ಸಾಕ್ಷಿ ದಾರರನ್ನಾಗಿ ಮಾಡಿಲ್ಲ . ಅದೇ ರೀತಿ ಆರೋಪಿಯ ಮನೆಯ ಸುತ್ತ ಅರಣ್ಯ ಪ್ರದೇಶ ಇರುತ್ತದೆ ಎಂದು ತೋರಿಸಲು ಯಾವುದೆ ದಾಖಲಾತಿ ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಸರಿ . ದಿಃ21-3-2024 ರಂದು ಲೊಕ ಸಭಾ ಚುನಾವಣಾ ನಿಮಿತ್ತ ನಿಮ್ಮ ಇಲಾಖಾ ವಾಹನದಲ್ಲಿ ಅಂಕೋಲಾದಲ್ಲಿ ಗಸ್ತು ತಿರುಗಿದ್ದು

ಇಲ್ಲ ಎಂದರೆ ಸರಿಯಲ್ಲ . ನೀವು ಹೇಳಿದಂತೆ ಆ ಸಮಯದಲ್ಲಿ ಬಾತ್ಮಿ ದಾರರಿಂದ ಯಾವುದೆ ಬಾತ್ಮಿ ಬಂದಿಲ್ಲ ಎಂದರೆ ಸರಿಯಲ್ಲ . ನೀವು ಆಗಿನ ಘಟನಾ ಸ್ದಳಕ್ಕೆ ಹೋದದ್ದು ಇಲ್ಲ ಮತ್ತು ಆರೋಪಿ ಮನೆಯಿಂದ ಯಾವುದೆ ಅಮಾನುತ್ತು ಪಡಿಸಿಕೊಂಡಿದ್ದು ಇಲ್ಲ ಪಂಚನಾಮೆ ಮಾಡಿದ್ದು ಇಲ್ಲ ಶೊಧನಾ ಸಮುಚಿತ ವಾರಟನ್ನು ಹೊರಡಿಸಿದ್ದು ಇಲ್ಲ ಎಂದರೆ ಸರಿಯಲ್ಲ . ಆರೋಪಿಯ ಅದಾರ ಕಾರ್ಡ ಸಿಕ್ಕಿದ್ದೆ ಇಲ್ಲ ಎಂದರೆ ಸರಿಯಲ್ಲ . ಚಾಸಾ –3 ರವರು ಸ್ದ್ರಿ ಹಳವಳ್ಳಿ ಯ ಬಿಟ್ ಅಬಕಾರಿ ಪೋಲಿಸರು ಎಂದು ತೋರಿಸಲು ಯಾವುದೆ ದಾಖಲಾತಿ ನ್ಯಾಯಾಲಯಕ್ಕೆ ಹಾಜರ ಪಡಿಸಿಲ್ಲ ಎಂದರೆ ಸರಿಯಲ್ಲ . ಬೆವಾರಸುದಾರ ವಸ್ತುಗಳನ್ನು ಠಾಣೆಯಲ್ಲಿ ಹಾಜರ ಪಡಿಸಿಕೊಂಡು ಈ ಪ್ರಕರಣ ಸೃಷ್ಟಿ ಮಾಡಿರುತ್ತಿರಿ ಎಂದರೆ ಸರಿಯಲ್ಲ . ನ್ಯಾಯಾಲಯದ ಮುಂದೆ ಇರುವ ಆರೋಪಿಗೂ ಮುದ್ದೆಮಾಲಿಗೂ ಯಾವುದೆ ಸಂಬಂದ ಇಲ್ಲ ಎಂದರೆ ಸರಿಯಲ್ಲ . ಪ್ರಕರಣಕ್ಕೆ ಅನೂಕುಲವಾಗುವ ರೀತಿಯಲ್ಲಿ ಮತ್ತು ಅಂಕಿ ಅಂಶಕೋಸ್ಕರ ಈ ಪ್ರಕರಣ ವನ್ನು ಸೃಷ್ಟಿ ಮಾಡಿರುತ್ತಿರಿ ಎಂದರೆ ಸರಿಯಲ್ಲ . ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ .

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.